ಯೋಜನೆ ಅನುಷ್ಠಾನಗೊಳಿಸಲು ಮುಂದೆ ಬರುವ ಕಂಪನಿಗಳಿಗೆ ಜಮೀನು ಹಂಚಿಕೆ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎನ್.ಸಂಪಂಗಿ :– ಉತ್ತರ ಕೊಟ್ಟಿದ್ದಾರೆ. ಅನೇಕ ಸಾರಿ ಈ ಸದನಕ್ಕೆ ತಪ್ಪು ಮಾಹಿತಿಯನ್ನು ಅಧಿಕಾರಿಗಳಿಂದ ಕೊಡಿಸಿದ್ದಾರೆ. ಅದನ್ನು ತಿದ್ದುಪಡಿ ಮಾಡಿದ್ದಾಗಿದೆ. ಈಗಾಗಲೇ 192 ಎಕರೆ ಪ್ರದೇಶವನ್ನು ನಮ್ಮ ಬಾಗೇಪಲ್ಲಿ ನ್ಯಾಷನಲ್ ಹೈವೇ ಪಕ್ಕದಲ್ಲಿರುವಂಥ ಜಾಗದಲ್ಲಿ ಆಗಬೇಕೆಂದು ತೀರ್ಮಾನವಾಗಿದೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ ಯಾವತ್ತು ಇದನ್ನು ಪ್ರಾರಂಭಿಸುತ್ತಾರೆ ಎಂಬ ಬಗ್ಗೆ ನಿಗದಿಯಾದಂಥ ದಿನಾಂಕವನ್ನು ಕೊಡಬೇಕು.

ಶ್ರೀ ಮುರುಗೇಶ್ ಆರ್.ನಿರಾಣಿ :– 11 ಜನ ರೈತರು ಕೋರ್ಟಿಗೆ ಹೋದ ಕಾರಣ ಸರ್ವೆ ನಂಬರ್ ಆಗದೇstayಆಗಿತ್ತು. ಈಗಾಗಲೇ ಆstay vacateಆಗಿದೆ. ನಾವು KIADB ಯಿಂದ ಏನು ಪರಿಹಾರಧನವನ್ನು ಕೊಡಿಸಬೇಕಾಗಿತ್ತು. ಅದನ್ನು SLO ಮೂಲಕ deposit ಮಾಡಿದ್ದೇವೆ. Majorಆಗಿ ಪರಿಹಾರಧನ ಕೊಟ್ಟಿದ್ದೇವೆ. ಈಗ ಸ್ವಲ್ಪ ರೈತರ ಹಣ ಉಳಿದಿದೆ ಅದನ್ನು ತಕ್ಷಣ startಮಾಡುತ್ತೇವೆ.

ಅಧ್ಯಕ್ಷರು :– Clarification ಕೇಳಿದ್ದೀರಿ.

ಶ್ರೀ ಎನ್.ಸಂಪಂಗಿ :– 2006 ರಲ್ಲಿ ಎಂದು ಹೇಳಿ ಇವತ್ತಿನವರೆಗೆ ಒಂದು ದಿನಾಂಕ ನಿಗದಿಪಡಿಸಿಲ್ಲ. ಅದಕ್ಕೆ ಅವರು ಯಾವತ್ತು ಪ್ರಾರಂಭಿಸುತ್ತಾರೆಂಬ ಬಗ್ಗೆ ದಿನಾಂಕವನ್ನು ನಿಗದಿ ಮಾಡಲಿ.

ಶ್ರೀ ಮುರುಗೇಶ್ ಆರ್.ನಿರಾಣಿ :– Immediate ಆಗಿ ಮಾಡುತ್ತೇವೆ.

ಅಧ್ಯಕ್ಷರು :– ಯು.ಟಿ.ಖಾದರ್‌ರವರು ಗಮನ ಸೆಳೆಯುವುದು.

3) ವಿಷಯ : 2010 ನೇ ಸಾಲಿನಲ್ಲಿ ನಡೆದ ಉಳ್ಳಾಲ್ ಸಯ್ಯದ್ ಮದನಿ ದರ್ಗಾ ಉರುಸ್ ಸಮಾರಂಭಕ್ಕೆ ರಾಜ್ಯ ಸರ್ಕಾರವು ಒಂದು ಕೋಟಿ ರೂ.ಗಳನ್ನು ವ್ಯಯ ಮಾಡಿದ್ದು, ಈ ಪೈಕಿ 50 ಲಕ್ಷ ರೂಪಾಯಿಗಳನ್ನು ಈವರೆವಿಗೂ ಬಿಡುಗಡೆ ಮಾಡದೇ ಇರುವ ಬಗ್ಗೆ.

ಶ್ರೀ ಯು.ಟಿ.ಖಾದರ್ (ಮಂಗಳೂರು) :– 2010 ನೇ ಸಾಲಿನಲ್ಲಿ ನಡೆದ ಉಳ್ಳಾಲ್ ಸಯ್ಯದ್ ಮದನಿ ದರ್ಗಾ ಉರುಸ್ ಸಮಾರಂಭಕ್ಕೆ ರಾಜ್ಯ

ಸರ್ಕಾರವು ಒಂದು ಕೋಟಿ ರೂ.ಗಳನ್ನು ವ್ಯಯ ಮಾಡಿದ್ದು, ಈ ಪೈಕಿ 50 ಲಕ್ಷ ರೂಪಾಯಿಗಳನ್ನು ಈವರೆವಿಗೂ ಬಿಡುಗಡೆ ಮಾಡದೇ ಇರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯಾವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :– ಮಾನ್ಯ ಅಧ್ಯಕ್ಷರೆ, 2009–10ರ ಆರ್ಥಿಕ ವರ್ಷದಲ್ಲಿ ಲೆಕ್ಕ ಶೀರ್ಷಿಕೆ 2250–00–102–5002 (ಯೋಜನೇತರ) ಅಡಿಯಲ್ಲಿ ಮಂಗಳೂರಿನ ಉಳ್ಳಾಲ ಉರುಸ್‌ಗಾಗಿ ಉಳ್ಳಾಲ ಹಜರತ್. ಸಯ್ಯದ್ ಮದನಿ ದರ್ಗಾ ಸಂಸ್ಥೆಗೆ 19ನೇ ಪಂಚವಾರ್ಷಿಕ ಉರುಸ್ ಸಮಾರಂಭವನ್ನು ಆಚರಿಸಲು ಅಂದಿನ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅನುದಾನ ರೂ.100.00 ಲಕ್ಷಗಳನ್ನು ನೀಡಲು ಆದೇಶಿಸಿದ್ದರು. ಸದರಿ ಆದೇಶದ ಮೇರೆಗೆ ಆರ್ಥಿಕ ಇಲಾಖೆಗೆ ಹೆಚ್ಚುವರಿ ಅನುದಾನ ಮಂಜೂರು ಮಾಡಲು ಕೋರಲಾಗಿ ಲೆಕ್ಕ ಶೀರ್ಷಿಕ್ಕೆ 2250–00–102–50–2 (ಯೋಜನೇತರ) ರಡಿಯಯಲ್ಲಿ ಒದಗಿಸಲಾದ ಅನುದಾನ ಪೈಕಿ ಉಳ್ಳಾಲ ಹಜರತ್ ಮದನಿ ದರ್ಗಾಕ್ಕೆ ನೀಡಲು ಆದೇಶಿಸಿತ್ತು. ಆದರೆ, 2009–10ನೇ ಆರ್ಥಿಕ ವರ್ಷದಲ್ಲಿ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ 471.50 ಲಕ್ಷ ಒದಗಿಸಿದ್ದು ಈ ಪೈಕಿ ರೂ.411.66 ಲಕ್ಷ ರಾಜ್ಯದ ಇತರೆ ವಕ್ಫ್ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ್ದು, ಉಳಿದ ರೂ.59.84 ಲಕ್ಷವನ್ನು ಸರ್ಕಾರಿ ಆದೇಶ ಸಂಖ್ಯೆ : MWD 468 WES 2009, ದಿನಾಂಕ:29–01–2010ರಲ್ಲಿ ಸದರಿ ಸಂಸ್ಥೆಗೆ ಬಿಡುಗಡೆ ಮಾಡಲಾಗಿತ್ತು.

ತದನಂತರ, ಪ್ರಸ್ತುತ 2010–13ನೇ ಸಾಲಿನಲ್ಲಿ ಉಳ್ಳಾಲ ಹಜರತ್ ಸಯ್ಯದ್ ಮದನಿ ದರ್ಗಾ ಸಂಸ್ಥೆಗೆ ಇನ್ನುಳಿದ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡುವ ಸಲುವಾಗಿ ವಿಶೇಷ ಅನುದಾನ ನೀಡಲು ಆರ್ಥಿಕ ಇಲಾಖೆಗೆ ಕೋರಿದ್ದು, ಆರ್ಥಿಕ ಇಲಾಖೆಯು ಲೆಕ್ಕ ಶೀರ್ಷಿಕೆ 2250–00–102–5–02(ಯೋಜನೇತರ) ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಲ್ಲಿಯೇ ಭರಿಸುವಂತೆ ಆದೇಶಿಸಿರುತ್ತದೆ.

ಪ್ರಸ್ತುತ ವರ್ಷ 2012–13ನೇ ಸಾಲಿನಲ್ಲಿ ಲೆಕ್ಕ ಶೀರ್ಷಕೆ 2250–00–102–5–02 (ಯೋಜನೇತರ)ರಡಿಯಲ್ಲಿ ರೂ.500.00 ಲಕ್ಷಗಳನ್ನು ಒದಗಿಸಿದ್ದು, ಈ ಪೈಕಿ ಒಂದನೇ, ಎರಡನೇ ಮತ್ತು ಮೂರನೇ ಕಂತಿನ ಅನುದಾನ ರೂ.375.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿ, ಸದರಿ ಮೊತ್ತದಿಂದ

ಈಗಾಗಲೇ 374.40 ಲಕ್ಷಗಳನ್ನು 312 ವಕ್ಫ್ ಸಂಸ್ಥೆಗಳಿಗೆ ಮಂಜೂರು ಮಾಡಲಾಗಿದೆ. ರಾಜ್ಯದ 30 ಜಿಲ್ಲೆಗಳಲ್ಲಿ ಸುಮಾರು 33,000ಕ್ಕಿಂತಲೂ ಹೆಚ್ಚು ವಕ್ಫ್ ಸಂಸ್ಥೆಗಳು ಇದ್ದು, ಅದರಲ್ಲಿ ಬಹುಪಾಲು ಸಂಸ್ಥೆಗಳ ಕಟ್ಟಡಗಳು (ಮಸೀದಿಗಳು ಹಾಗೂ ದರ್ಗಾಗಳು) ತುಂಬಾ ಶಿಥಿಲಗೊಂಡಿದ್ದು, ಅದರ ದುರಸ್ತಿಗೆ ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ಸಚಿವರುಗಳು, ವಿಧಾನಸಭಾ ಮತ್ತು ವಿಧಾನಪರಿಷತ್ ಸದಸ್ಯರುಗಳು ಹಾಗೂ ಇತರೆ ಜನಪ್ರತಿನಿಧಿಗಳಿಂದ ಕಟ್ಟಡಗಳ ದುರಸ್ತಿಗೆ ಹಾಗೂ ಮುಸ್ಲಿಂ ಸಮುದಾಯದ ಸ್ಮಶಾನ ಭೂಮಿಗಳಾದ ಖಬರಸ್ಥಾನಕ್ಕೆ ಹಾಗೂ ವಕ್ಫ್ ಸಂಸ್ಥೆಗಳ ಆಸ್ತಿ ಸಂರಕ್ಷಿಸಲು ತಂತಿ ಬೇಲಿ ಹಾಗೂ ಕಾಂಪೌಂಡ್ ನಿರ್ಮಿಸಲು ಸಾಕಷ್ಟು ಮನವಿಗಳು ಬರುತ್ತಿದ್ದು, ಹಾಲಿ ಇಲಾಖೆಗೆ ನೀಡಿರುವ ಕೇವಲ ರೂ.5.00 ಕೋಟಿಗಳು ಲೆಕ್ಕ ಶೀರ್ಷಿಕೆ= 2250–00–102–5–02–101ರಡಿ ಹಾಗೂ ರೂ.5.00 ಕೋಟಿ ಲೆಕ್ಕ ಶೀರ್ಷಿಕೆ 2225–03–102–13 (ಯೋಜನೆ) ರಡಿ ನೀಡಲಾಗಿ, ಈ ಪೈಕಿ ಒಂದನೇ, ಎರಡನೇ ಮತ್ತು ಮೂರನೇ ಕಂತಿನ ಅನುದಾನ ರೂ. 375.00 ಲಕ್ಷ ಹಣದಿಂದ 200 ವಕ್ಫ್ ಸಂಸ್ಥೆಗಳಿಗೆ ರೂ.361.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಹಂಚಿಕೆ–ಯಾಗಿರುವ ಅಲ್ಪಪ್ರಮಾಣದ ಅನುದಾನದಿಂದ ಜನಪ್ರತಿನಿಧಿಗಳ ಮನವಿಗಳಿಗೆ ಸ್ಪಂದಿಸಲು ಸಾಧ್ಯವಾಗುತ್ತಿರುವುದಿಲ್ಲ.ವಕ್ಫ್ ಸಂಸ್ಥೆಗಳ ದುರಸ್ತಿ ಹಾಗೂ ಜೀರ್ಣೋದ್ಧಾರಕ್ಕಾಗಿ ರೂ. 208.00 ಕೋಟಿಗಳು ಹಾಗೂ ವಕ್ಫ್ ಸಂಸ್ಥೆಗಳ ಆಸ್ತಿ ಸಂರಕ್ಷಿಸಲು, ತಂತಿ ಬೇಲಿ ಹಾಗೂ ಕಾಂಪೌಂಡ ನಿರ್ಮಿಸಲು ರೂ, 39.00 ಕೋಟಿಗಳ ಅವಶ್ಯಕತೆ ಇದ್ದು ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಹಜರತ್ ಸಯ್ಯದ್ ಮದನಿ ದರ್ಗಾಕ್ಕೆ ರೂ. 50.00 ಲಕ್ಷಗಳ ಹೆಚ್ಚುವರಿ ಅನುದಾನ ಕೋರಿ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಮುಂದುವರೆದು ನಾಲ್ಕನೇ ಕಂತಿನ ಅನುದಾನ ರೂ.125.00 ಲಕ್ಷಗಳ ಬಿಡುಗಡೆಯಾಗಿ ಕಡತವನ್ನು ಸಹ ಈಗಾಗಲೇ ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಅಂತಿಮ ಕಂತಿನ ಅನುದಾನ ರೂ. 125.00 ಲಕ್ಷಗಳು ಅಥವಾ ಹೆಚ್ಚುವರಿ ಅನುದಾನ ಆರ್ಥಿಕ ಇಲಾಖೆಯಿಂದ ಲಭ್ಯವಾದ ಕೂಡಲೇ ಉಳ್ಳಾಲದ ಹಜರತ್ ಸಯ್ಯದ್ ಮದನಿ ದರ್ಗಾ ಸಂಸ್ಥೆಗೆ ರೂ.50.00 ಲಕ್ಷ ಅನುದಾನ ಬಿಡುಗಡೆ ಮಾಡಲು ಅಗತ್ಯ ಕ್ರಮ ವಹಿಸಲಾಗುವುದು.

ಶ್ರೀ ಯು.ಟಿ.ಖಾದರ್ :– ಸಭಾಧ್ಯಕ್ಷರೆ, ಇತಿಹಾಸ ಪ್ರಸಿದ್ಧ ಉಳ್ಳಾಲ್ ಸಯ್ಯದ್ ಮದನಿ ದರ್ಗಾ 5 ವರ್ಷಕ್ಕೊಮ್ಮೆ ನಡೆಯುವಂಥ ಉರಸ್ ಕಾರ್ಯಕ್ರಮವದು. ಕಳೆದ 15 ವರ್ಷಗಳ ಹಿಂದೆ ಸನ್ಮಾನ್ಯ ಎಸ್.ಎಂ.ಕೃಷ್ಣ, ಧರಂಸಿಂಗ್‌ರವರು ಇದ್ದಾಗ ಕೊಟ್ಟಿದ್ದರು.

ಅಧ್ಯಕ್ಷರು :– ಈಗ ನಿಮಗೆ ಹಣಕೊಟ್ಟಿಲ್ಲ, balance ಇದೆಯೇ ಕೇಳಿ.

ಶ್ರೀ ಯು.ಟಿ.ಖಾದರ್ :– ರಾಜ್ಯ ಸರ್ಕಾರದಿಂದ ಒಂದು ಕೋಟಿ ರೂಪಾಯಿಗಳು ಬಿಡುಗಡೆಯಾಯಿತು. 50 ಲಕ್ಷ ರೂಪಾಯಿಗಳನ್ನು ಕೊಟ್ಟರು. ಉಳಿದ 50 ಲಕ್ಷ ರೂಪಾಯಿಗಳನ್ನು ಪಡೆಯಲು ಆರು ತಿಂಗಳುಗಳಿಂದ ಒಮ್ಮೆ ಹಣಕಾಸು ಇಲಾಖೆಗೆ ಮತ್ತೊಮ್ಮೆ ಮೈನಾರಿಟಿ ಕಛೇರಿಗೆ ಓಡಾಡುತ್ತಿದ್ದೇವೆ. ಹಣಕಾಸು ಇಲಾಖೆಯವರು ನಾವು ಮೊದಲನೇ ಕಂತಿನ ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ. ಎರಡನೇ ಕಂತಿನ ಹಣ ಬಿಡುಗಡೆ ಮಾಡುವ ಸಂದರ್ಭದಲ್ಲಿ ಅಲ್ಲಿ ಹೊಸಬರೊಬ್ಬರು ಅಧೀನ ಕಾರ್ಯದರ್ಶಿಯವರು ಇದ್ದಾರೆ, ಅವರು ಮುಖ್ಯಮಂತ್ರಿ, ಮಂತ್ರಿಗಳಿಗಿಂತ ದೊಡ್ಡವರು. ಮಾನ್ಯ ಮುಖ್ಯಮಂತ್ರಿಗಳು ಮಾಡಿದ ಆದೇಶವನ್ನು ಆ ಅಬ್ಬಾಸ್ ಷರೀಫ್ ಎನ್ನುವವರು ನಮ್ಮಲ್ಲಿ ಹಣದ ಕೊರತೆ ಇದೆ, ನಮಗೆ ಅನುದಾನ ಕೊಡಲಿಲ್ಲವೆಂದು ಬರೆಯುತ್ತಾರೆ. ಇವರಿಗೆ ಆ ರೀತಿ ಡೈರೆಕ್ಟ್ ಆಗಿ ಬರೆಯಲಿಕ್ಕೆ ಯಾರು ಅಧಿಕಾರ ಕೊಟ್ಟರು? ಅವರ ಮೇಲೆ ತಕ್ಷಣ ಕ್ರಮ ಆಗಬೇಕೆಂದು ಕೇಳುತ್ತೇನೆ. ಎರಡನೆಯದಾಗಿ ಹಣಕಾಸು ಇಲಾಖೆಯಲ್ಲಿ ಕೇಳಿದರೆ ಅವರಿಗೆ 14 ಕೋಟಿ ರೂಪಾಯಿಗಳ ಹಣ ಇದೆ ಅದರಲ್ಲಿ ಕೊಡಲಿ ಮಾನ್ಯ ಮುಖ್ಯಮಂತ್ರಿಗಳು ಆದೇಶ ಮಾಡಲಿ ಮುಂದೆ ನಾವು ಸಬ್ಮಿಟ್ ಮಾಡುತ್ತೇವೆಂದು ಹೇಳುತ್ತಾರೆ. ಈ ರಿಸಲ್ಟ್ ಬಂದಾಗ ಮತ್ತೆ ನಮಗೆ ಹೆಚ್ಚುವರಿಯಾಗಿ ಅನುದಾನ ಕೊಡಿ ಎಂದು ಬರೆಯುತ್ತಾರೆ. ಮತ್ತೆ ಫೈನಾನ್ಸ್‌ಗೆ ಬಂದಾಗ ಅವರು ಆ 14 ಕೋಟಿ ರೂಪಾಯಿಗಳನ್ನು ಖಾಲಿ ಮಾಡದೆ ನಮಗೆ ಹೆಚ್ಚುವರಿಯಾಗಿ ಅನುದಾನ ಕೊಡಲಿಕ್ಕೆ ಆಗುವುದಿಲ್ಲವೆಂದು ಅವರು ಹೇಳುತ್ತಾರೆ. ಹೀಗಾಗಿ ಇದುವರೆಗೆ ಹಣ ಕೊಡಲಿಲ್ಲ. ಆದಕಾರಣ ತಕ್ಷಣ ಈ ಅನುದಾನ ಬಿಡುಗಡೆ ಮಾಡಬೇಕು. ಎರಡನೆಯದಾಗಿ ಮುಖ್ಯಮಂತ್ರಿ, ಕಾರ್ಯದರ್ಶಿಯವರಿಗಿಂತ ದೊಡ್ಡ ಜನ ಅಧೀನ ಕಾರ್ಯದರ್ಶಿಯವರು ವಕ್ಫ್ ಮಂದಿ ಯಾರು ಅಲ್ಲಿ ಕುಳಿತಿದ್ದಾರೆ ಅವರಿಂದಾಗಿ ಇವೆಲ್ಲಾ ಸಮಸ್ಯೆ, ತೊಂದರೆಯಾಗುವಂಥದ್ದು. ಅಂಥ

ಅಧಿಕಾರಿಗಳು ಅಲ್ಲಿ ಇರಬಾರದು. ಬೇರೆಯವರನ್ನು ಕೊಟ್ಟಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಇಂಥ ಅಧಿಕಾರಿಗಳಿಗೆ ಅಧಿಕಾರ ಕೊಡುವುದು ಬೇರೆ ಅವರು ಹೇಳುವುದನ್ನು ಕೇಳುವುದಾದರೆ ಈ ಸರ್ಕಾರ ನಡೆಯುವುದಾದರು ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಆದೇಶಕ್ಕೆ ಇವತ್ತು ಬೆಲೆ ಇಲ್ಲ. ಸರ್ಕಾರದ ಆದೇಶಕ್ಕೆ ಬೆಲೆ ಇಲ್ಲವೆಂದರೆ ಯಾವರೀತಿ ಇರಬೇಕು ಎಂದು ನಾನು ಕೇಳಲಿಚ್ಛಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಮಾನ್ಯ ಕಾನೂನು, ಮಾನವ ಹಕ್ಕು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ, ಬೆಂಗಳೂರು ಜಲಮಂಡಳಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :– ಮಾನ್ಯ ಅಧ್ಯಕ್ಷರೆ, ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ಕಳೆದ ಆರು ತಿಂಗಳಿಂದ ಪ್ರಯತ್ನ ನಡೆಯುತ್ತಿದೆಯೆಂಬ ಮಾತನ್ನು ತಾವು ಹೇಳಿದ್ದೀರಿ. ಈಗ ಆರ್ಥಿಕ ಇಲಾಖೆಗೆ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಕೇಳಿದ್ದೇವೆ. ಅದು ಬಂದ ತಕ್ಷಣ ಹಜರತ್ ಸಯ್ಯದ್ ಮದನಿ ದರ್ಗಾ ಸಂಸ್ಥೆಗೆ 50 ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮವನ್ನು ಅತ್ಯಂತ ಶೀಘ್ರವಾಗಿ ತೆಗೆದು–ಕೊಳ್ಳುತ್ತೇವೆ.

ಅಧ್ಯಕ್ಷರು :– ಆದಷ್ಟು ಬೇಗ ಬಿಡುಗಡೆ ಮಾಡಿ.

ಶ್ರೀ ಎಸ್.ಸುರೇಶ್ ಕುಮಾರ್ :– ಆದಷ್ಟು ಬೇಗ ಕೊಡುತ್ತೇವೆ.

ಅಧ್ಯಕ್ಷರು :– ಆದಷ್ಟು ಬೇಗ ಕೊಡುತ್ತಾರೆ.

ಶ್ರೀ ಯು.ಟಿ.ಖಾದರ್ :– ಉತ್ತರ ಕೊಡುವಾಗ ಸರಿಯಾದ ಉತ್ತರವನ್ನು ಕೊಡಬೇಕು. Supplementary ಯಲ್ಲಿ ಕೊಡುವುದಕ್ಕಾಗು–ವುದಿಲ್ಲ. ಮತ್ತೆ ಯಾವಾಗ Supplementary ಕೊಡುತ್ತೀರಿ? ಆರ್ಥಿಕ ಇಲಾಖೆಯವರು Supplementary ಯಲ್ಲಿ ಕೊಡುತ್ತಾರಾ? ಆಗ ಏನು ಮಾಡುತ್ತಾರೆ?

ಅಧ್ಯಕ್ಷರು:– ಆದಷ್ಟು ಬೇಗ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತಾರೆ.

4) ವಿಷಯ : ಸಿಂಧನೂರು ನಗರದಲ್ಲಿ ಹೊಸದಾಗಿ ಚರಂಡಿ ನಿರ್ಮಾಣ ಹಾಗೂ ರಸ್ತೆ ಅಗಲೀಕರಣ ಮಾಡಲು ಸರ್ಕಾರದಿಂದ ರೂ.6.20 ಕೋಟಿ ಹಣ